S. post 30747634 oin

# ಕರ್ನಾಟಕ ಸರ್ಕಾರ

No RD 78 MRR 2008

ಭೂಮಿ ಉಸ್ತುವಾರಿ ಕೋಶ
ಕೆ.ಆರ್. ವೃತ್ತ
ಬೆಂಗಳೂರು – 560 001

ಜಿಲ್ಲಾಧಿಕಾರಿಗಳ ಕಛೇರಿ
ಹಾಸನ ಜಿಲ್ಲೆ, ಹಾಸನ
16 OCT 2008

## ಸುತ್ತೋಲೆ

ವಿಷಯ:– ಭೂ ದಾಖಲೆ ಗಣಕೀಕರಣ ಕಾರ್ಯದಲ್ಲಿ ಒಳಗೊಂಡಿರುವ ಅಧಿಕಾರಿಗಳ ಹೆಸರು ವಿವರ ತಿಳಿಯುವಂತೆ ಮೊಹರು ಒದಗಿಸುವ ಬಗ್ಗೆ.

******

ಭೂ ದಾಖಲೆ ಗಣಕೀಕರಣ ಮತ್ತು ಪೋಡಿ ಪ್ರಕರಣಗಳಲ್ಲಿ ಕಂದಾಯ ಇಲಾಖೆ ಅಧಿಕಾರಿಗಳಾದ ಗ್ರಾಮ ಲೆಕ್ಕಿಗರು, ರಾಜಸ್ವ ನಿರೀಕ್ಷಕರು, ಶಿರಸ್ತೇದಾರರು, ತಹಸೀಲ್ದಾರರು, ಮೋಜಿಣಿದಾರರು, ಮೋಜಿಣೀದಾರರ ಮೇಲ್ವಿಚಾರಕರು ಖಾತೆ ಬದಲಾವಣೆ ಮತ್ತು ದುರಸ್ಥಿಯಂತಹ ಅನೇಕ ಪ್ರಕರಣಕಗಳಲ್ಲಿ ಅಂತಿಮ ಆದೇಶ/ವರದಿ ಮಾಡುತ್ತಿದ್ದು, ಈ ವರದಿಯನು ಆದೇಶ ಮಾಡಿದ/ತಯಾರಿಸಿದ ಬಗ್ಗೆ ಅಂತಿಮವಾಗಿ ಅವರು ಸಹಿ ಮಾಡುತ್ತಿದ್ದು ಸರಿಯಷ್ಟೆ. ಇಂತಹ ಕೆಲವು ಪ್ರಕರಣಗಳಲ್ಲಿ ಹಲವಾರು ವರ್ಷಗಳ ನಂತರ ಈ ಪ್ರಕರಣಗಳು ನ್ಯಾಯಾಲಯಕ್ಕೆ ಹೋದಲ್ಲಿ ಅಥವಾ ಇಲಾಖಾ ವಿಚಾರಣೆ ಆರಂಭವಾದಲ್ಲಿ ಆದೇಶ ಮಾಡಿದವರ ಹೆಸರು ಮತ್ತು ಪದನಾಮ ತಿಳಿಯಲು ಸಾಧ್ಯವಾಗುವುದಿಲ್ಲ. ಈ ಸಮಸ್ಯೆಯನ್ನು ನಿವಾರಿಸಲು ಎಲ್ಲಾ ಜಿಲ್ಲಾಧಿಕಾರಿಗಳು ಕೂಡಲೆ ತಮ್ಮ ಅಧೀನದಲ್ಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ತಹಶೀಲ್ದಾರರು, ಭೂಮಿ ಶಿರಸ್ತೇದಾರರು, ರಾಜಸ್ವ ನಿರೀಕ್ಷಕರು, ಗ್ರಾಮ ಲೆಕ್ಕಿಕರರು, ಶಿರಸ್ತೇದಾರರು, ಮೋಜಿಣಿದಾರರು, ಮೋಜಿಣೀದಾರರ ಮೇಲ್ವಿಚಾರಕರ, ಹೆಸರು ಪದನಾಮ ನಿರ್ವಹಿಸುತ್ತಿರುವ ವೃತ್ತದ ವಿವರಗಳನ್ನೊಳಗೊಂಡಂತೆ ಮೊಹರು ಮಾಡಿಸಿ ಕೂಡಲೆ ಉಪಯೋಗಿಸಿಕೊಳ್ಳುವಂತೆ ಸೂಚಿಸುವುದು. ಯಾವುದೇ ನೌಕರರು ವರ್ಗಾವಣೆಯಾದಲ್ಲಿ, ನಿವೃತ್ತಿಯಾದಲ್ಲಿ ಕೂಡಲೆ ಅವರ ಪ್ರಭಾರ ಪಟ್ಟಿಯೊಂದಿಗೆ ಈ ಮೊಹರನ್ನು ಸಹ ಹಿಂದಕ್ಕೆ ಪಡೆಯುವುದು. ಮೊಹರು ತಯಾರಿಕೆಗೆ ಬೇಕಾದ ಮೊಬಲಗನ್ನು ಭೂಮಿ ಬಳಕೆದಾರರ ನಿಧಿಯಿಂದ ಭರಿಸಲು ಸೂಚಿಸಿದೆ.

GL NO 9453

18/10 21/10

**ರಾಜೀವ್ ಚಾವ್ಲ ಐ.ಎ.ಎಸ್.**
ವಿಶೇಷ ಕಾರ್ಯದರ್ಶಿಗಳು (ಭೂಮಿ)
ಕಂದಾಯ ಇಲಾಖೆ

ಜಿಲ್ಲಾಧಿಕಾರಿಗಳವರ ಕಛೇರಿ
ಹಾಸನ ಜಿಲ್ಲೆ, ಹಾಸನ.
ದಿನಾಂಕ 29/12/08

ಯಥಾ ನಕಲನ್ನು:–

1. ಎಲ್ಲಾ ಪ್ರಾದೇಶಿಕ ಆಯುಕ್ತರು.
2. ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಲಾಗಿದೆ.

ಸಂ. ಕಂ ... 42/08-09
ಎಲ್ಲಾ ತಾಲ್ಲೂಕು ತಹಶೀಲ್ದಾರ್‌ಗೆ ರವಾನಿಸುತ್ತಾ ಮೇಲ್ಕಂಡ ಸುತ್ತೋಲೆಯಂತೆ ಕ್ರಮವಹಿಸಿ ಅನುಪಾಲನಾ ವರದಿ ನೀಡಲು ಸೂಚಿಸಿದೆ.

ಜಿಲ್ಲಾಧಿಕಾರಿಗಳ ಪರವಾಗಿ